ವಾರದ ಕತೆ



# ದೂರದ ನಗರವೊಂದರಲ್ಲಿ

ಮೊನ್ನೆ ಮೊನ್ನೆ ದೂರದ ನಗರವೊಂದರಲ್ಲಿ...

ಆಸ್ಪತ್ರೆ ಕಟ್ಟಡದ ಹನ್ನೆರಡನೆ ಅಂತಸ್ತಿನಲ್ಲಿರುವ ನ್ಯೂರೋಲಜಿ ವಾರ್ಡಿನ ಎಂಟನೆ ನಂಬರ್ ಕೊಠಡಿಯೊಳಗೆ ಒಬ್ಬ ಯುವಕ ಪ್ರಜ್ಞೆ ಇಲ್ಲದೆ ಮಲಗಿರುವನು. ಆತನ ಜೀವವನ್ನು ತಡೆ ಹಿಡಿದಿರುವುದು ಮೂಗಿಗೆ ಜೋಡಿಸಲಾದ ನಳಿಗೆಯಿಂದ ಬರುವ ಆಕ್ಸಿಜನ್ ಮತ್ತು ತೋಳಿಗೆ ಜೋಡಿಸಲಾದ ನಳಿಗೆಯಿಂದ ರಕ್ತಧಮನಿಗೆ ಸೇರುವ ಔಷಧಿ ಮಿಶ್ರಿತ ಸಲೈನ್‌ಗಳೇ. ತಿಂಗಳ ಹಿಂದೆ ತಾಳಿಕಟ್ಟಿ ಆತ ತನ್ನ ಬಾಳಗೆಳತಿಯನ್ನಾಗಿ ಮಾಡಿಕೊಂಡಿದ್ದ ಹುಡುಗಿ ಒಂದು ದಿನವಿಡೀ ಸಾವಿನೊಂದಿಗೆ ಸೆಣಸಾಡಿಯೂ ವಿದಾಯ ಹೇಳದೆಯೇ ಹೊರಟು ಹೋದ ಸಂಗತಿ ಆತನಿಗೆ ತಿಳಿದಿಲ್ಲ. ಬಹುಶಃ ಅದು ತಿಳಿಯದೇನೇ ಆತನೂ ಹೊರಟುಹೋದಾನು.

ಅವರಿಬ್ಬರೂ ನಕ್ಕು ನಗಿಸುತ್ತ ಕೊನೆಯ ಬಾರಿ ಮಾಡಿದ್ದ ಬೈಕ್ ಸವಾರಿಯನ್ನೂ ಆತ ಇನ್ನುಮುಂದೆ ನೆನೆಯುವಂತಿಲ್ಲ. ಆ ಸವಾರಿಗೆ ಹೊರಡುವ ಮುನ್ನ ಆಕೆ ಮತ್ತು ಕಿರಿಯ ಭಾವನೆಂಟನ ಕಣ್ತಪ್ಪಿಸಿ ಮಹಡಿ ಮೇಲಿನ ಮಲಗುವ ಕೋಣೆಯಿಂದ ಸುರಿದುಕೊಟ್ಟಿದ್ದ ಪ್ರೀತಿಯ ಸವಿಯನ್ನೂ ಇನ್ನು ಮುಂದೆ ಆತ ಮೆಲುಕಾಡಲಾರ. ಸ್ಕ್ಯಾನ್ ರಿಪೋರ್ಟ್ ತೀರಾ ಕೆಟ್ಟದ್ದಾಗಿತ್ತು. ಮಿದುಳಿನ ಹಿಟ್ಟಿನ ಭಾಗದಲ್ಲಿ ನೆತ್ತರು ಸೋರಿ ಹೆಪ್ಪುಗಟ್ಟಿದ್ದರಿಂದ ಕಂಪ್ಯೂಟರ್‌ನ ಮೊನಿಟರ್‌ನಲ್ಲಿ ವಿಚಿತ್ರ ರೂಪಗಳೇ ಕಾಣಿಸಿಕೊಂಡಿದ್ದವು. ಆತನ ಮಂಚದ

ಮಲಯಾಳಂ ಮೂಲ: ● ಇ. ಹರಿಕುಮಾರ್
ಕನ್ನಡಕ್ಕೆ: ● ಕೆ.ಕೆ. ನಾಯರ್

ಕಾಲುಬದಿಯಲ್ಲಿ ಹಾಕಲಾದ ಕುರ್ಚಿಯಲ್ಲಿ ನಿರ್ಭಾವದ ಮುಖದೊಂದಿಗೆ, ಭೋರ್ಗರೆಯುವ ಹೃದಯದೊಂದಿಗೆ ಕುಳಿತಿರುವವರು ಅವನ ಅಪ್ಪ...

ನಗರಪಾಲಿಕೆಯ ಸಭೆ ನಡೆಯುತ್ತಾ ಇದೆ. ಅದೊಂದು ತುರ್ತು ಸಭೆ. ರಸ್ತೆಯ ಅಪಘಾತಕ್ಕೆ ಕಾರಣವಾದ ಆ ಶಿಲೆಕಲ್ಲು ರಸ್ತೆಯಲ್ಲಿ ಹೇಗೆ ಬಂದದ್ದು ಎಂಬುದು ಈಗಿನ ಚರ್ಚಾ ವಿಷಯ. ನಗರಪಾಲಿಕೆಯ ವತಿಯಿಂದ ನೇಮಿಸಲಾದ ಪಂಚಸದಸ್ಯ ತನಿಖಾ ಸಮಿತಿ ಇಂದು ಬೆಳಗ್ಗೆಯೇ ಅಪಘಾತ ಘಟಿಸಿದ್ದ ಸ್ಥಳವನ್ನು ಪರಿಶೀಲಿಸಿದೆ ಹಾಗೂ ವಾಹನಗಳು ಹಾದು ಹೋಗುವಲ್ಲ ರಸ್ತೆಯ ಒಳಬದಿಯಲ್ಲಿರುವ ಶಿಲೆಕಲ್ಲೊಂದು ಡಾಮರ್‌ನಲ್ಲಿ ಗಟ್ಟಿಗೊಂಡಿರುವುದೇ ಅಪಘಾತಕ್ಕೆ ಕಾರಣವೆಂಬ ನಿರ್ಧಾರಕ್ಕೂ ಬಂದಿದೆ. ಆ ಕಲ್ಲು ಅಲ್ಲಿ ಬರಲು ಕಾರಣಕರ್ತರು ಯಾರು ಎಂಬುದಷ್ಟೆ ಇನ್ನು ನಿರ್ಧರಿಸಬೇಕಾಗಿದೆ. ಅದು ನಗರಪಾಲಿಕೆಯಾಗಲಿ, ಅದರ ಯಾವುದೇ ಅಧೀನ ಸಂಸ್ಥೆಯಾಗಲಿ ಅಲ್ಲವೆಂಬ ನಿರ್ಧಾರವನ್ನು ಸಭೆ ಇಷ್ಟರಲ್ಲೆ ತೆಗೆದುಕೊಂಡಾಗಿದೆ- ಇನ್ನೊಂದು ಬೇಜವಾಬ್ದಾರಿ ವರ್ತನೆ ನಗರಪಾಲಿಕೆಯಿಂದ ಘಟಿಸಲಾರದು. ಸಂದೇಹದ ನೆರಳು ಬಿದ್ದದ್ದು ಸಹಜವಾಗಿಯೇ ವಿದ್ಯುನ್ಮಂಡಲಿ ಮತ್ತು ಟೆಲಿಫೋನ್ ಇಲಾಖೆಗಳ ಮೇಲೆ. ಆ ನೆರಳಿಗೆ ಕಡುಕಪ್ಪು ಬಣ್ಣಬಳಿದು ಪಂಚ ಸದಸ್ಯ ಸಮಿತಿ ಒಂದು ವರದಿಯನ್ನು ತಯಾರಿಸಿ ತನ್ನ ಕರ್ತವ್ಯವನ್ನು ಬಲುಚೆನ್ನಾಗಿಯೆ ನಿರ್ವಹಿಸಿದೆ. ಸದರಿ ಉಭಯ ಸಂಸ್ಥೆಗಳಲ್ಲಿ ನಿಜಕ್ಕೂ ಹೊಣೆ ಯಾವುದರದ್ದು ಎಂಬುದನ್ನು ಪತ್ತೆಹಚ್ಚಲು ಬೇರೊಂದು ಆಯೋಗವನ್ನು ನಿಯೋಜಿಸಬೇಕಾಗಿದೆ. ಆ ಕಾರ್ಯ ಈ ಸಮಿತಿಯ ವ್ಯಾಪ್ತಿಗೆ ಒಳಪಡುವುದಿಲ್ಲ.

ಮಾಧ್ಯಮಗಳೂ ಸುಮ್ಮಗೆ ಕೂಡಲಿಲ್ಲ. ತಮ್ಮದೇ ದಾರಿಯಲ್ಲಿ ಅವೂ ಅನ್ವೇಷಣೆಯನ್ನಾರಂಭಿಸಿದವು. ಬಾತ್ಮೀದಾರರು ಉಡುಪಿನೊಳಗೆ ಟೇಪ್‌ರಿಕಾರ್ಡ್ ಬಚ್ಚಿಟ್ಟುಕೊಂಡು ಸ್ಥಳೀಯರ ಸಂದರ್ಶನ ನಡೆಸಿದರು. ಚಾನಲ್ ಟಿವಿಯವರು ಧಡೂತಿ ಕೆಮರಾ ಮತ್ತು ಧ್ವನಿವರ್ಧಕಗಳೊಂದಿಗೆ ಸ್ಥಳಕ್ಕೆ ಆಗಮಿಸಿದರು. ಟಿವಿ ಪರದೆಯಲ್ಲಿ ಮುಖ ಕಾಣಿಸೀತೆಂಬ ಆಸೆಯಿಂದ ಸ್ಥಳೀಯರು ಅವರನ್ನು ವಿಶೇಷವಾಗಿ ಸ್ವಾಗತಿಸಿದರು. ಆ ಶಿಲೆಕಲ್ಲಿನ ಕುರಿತೂ ಅದು ಉಂಟು ಮಾಡಿದ್ದ ದುರಂತದ ಕುರಿತೂ ಬಹಳಷ್ಟು ಮಾತಾಡಿದರು. ಅದು ಸ್ವಯಂಭೂ ಎಂದೂ ಅದಕ್ಕೆ ಆವರಣ ಗೋಡೆ ಮತ್ತು ಗುಡಿ ಕಟ್ಟಿಸಬೇಕೆಂದೂ ಹೇಳಿದರು. ಭಾನುವಾರದ ಪೂಜೆಯ ಬಳಿಕ ಪಾದರಿಯೊಬ್ಬರು ಹೆಸರಿಸದೆಯೇ ಕೆಲವು ಧರ್ಮಾಂಧರು ಮತೀಯ ಸಾಮರಸ್ಯ ಕೆಡಿಸುತ್ತಿರುವುದನ್ನು ಬಲವಾಗಿ ಖಂಡಿಸಿದರು. ವರ್ಷ ವರ್ಷಗಳಿಂದ ಪೋಷಿಸುತ್ತ ಬಂದಿರುವ ಮತೀಯ ಸೌಹಾರ್ದವನ್ನು ಕೆಲವು ಕೋಮು ಶಕ್ತಿಗಳು ಧ್ವಂಸಮಾಡಲು ಹವಣಿಸುತ್ತಿವೆ ಎಂದು ಎಡ ಮತ್ತು ಬಲಪಂಥೀಯರು ಒಕ್ಕೊರಲಿನಿಂದ ಘೋಷಿಸಿದರು. ಮಾನವ ಸರಪಳಿ ನಿರ್ಮಿಸಿ ಎಡಪಂಥೀಯರೂ ಸಾಮೂಹಿಕ ಓಟ ನಡೆಸಿ ಬಲಪಂಥೀಯರೂ ಅದನ್ನು ಪ್ರತಿಭಟಿಸುವುದರೊಂದಿಗೆ ಪರಿಸ್ಥಿತಿ ತುಸು ಶಾಂತವಾಯಿತು.

ನಾಲ್ಕು ವರ್ಷಗಳ ಹಿಂದೆ ರಸ್ತೆಗೆ ಟಾರು ಹಾಕಿದ್ದಾಗ ಟಾರು ಡಬ್ಬವನ್ನು ಬಿಸಿ ಮಾಡಲು ಹೂಡಿದ್ದ ಒಲೆಗೆ ಬಳಸಿದ್ದು ಆ ಕಲ್ಲು; ಅದನ್ನು ಸ್ಥಳಾಂತರಿಸಲು ಯಾರೂ ಮನಸ್ಸು ಮಾಡಲಿಲ್ಲ ಎಂಬ ಸತ್ಯ ಸಂಗತಿಯನ್ನು ಒಬ್ಬರು ಮಾತ್ರ ಹೇಳಿದರು. ಆ ಶಿಲೆಕಲ್ಲಿಗೆ ತಾಗಿ ಏಳು ಅಪಘಾತಗಳು ಸಂಭವಿಸಿರುವುದಾಗಿಯೂ ಅವರು ಹೇಳಿದರು. ಅವುಗಳಲ್ಲಿ ಆರೂ ಅಷ್ಟೇನೂ ಗಂಭೀರ ಅಪಘಾತಗಳಾಗಿರಲಿಲ್ಲ. ತಲೆಗೆ ಕೆಲವು ಸ್ಟಿಚ್, ಕೈಗೋ ಕಾಲಿಗೋ ಪ್ಲಾಸ್ಟರ್ ಅಷ್ಟೇ. ಏಳನೆಯ ಅಪಘಾತವಷ್ಟೇ ಗಂಭೀರವಾದುದಾಗಿತ್ತು. ಆತ ಒಬ್ಬ ನಿವೃತ್ತ ಶಾಲಾ ಮೇಷ್ಟ್ರು. ಆ ರಸ್ತೆಗುಂಟ ದಿನವೂ ಎರಡುಬಾರಿ ದೇವಿಗುಡಿಗೆ ಹೋಗಿ ಬರುವಾತ. ಕಲ್ಲಿನ ಕುರಿತು ಮೇಷ್ಟ್ರು ನೀಡಿದ್ದ ವಿವರಣೆ ಉದ್ವೇಗಕಾರಿಯಲ್ಲದ

NEXT PAGE....

ಒಳಗೆ ಬಂದು ಮಂಚದ ಬಳಿ, ಬಗಿದುಕೊಂಡ ಮುಖದೊಂದಿಗೆ ಕುಸು ಹೊತ್ತು ನಿಲ್ಲುತ್ತಿದ್ದರು. ಆಮೇಲೆ ಹೊರಗೆ ಹೋಗಿ ವರಾಂಡದಲ್ಲಿ ನಿಂತಿರುತ್ತಿದ್ದ ಮಿತ್ರರೊಡನೆ ಕಚೇರಿಕಾರ್ಯಗಳನ್ನಾಗಲಿ, ನಗೆಚಾಟಿಕೆಗಳನ್ನಾಗಲಿ ಹೇಳಿ ನಗುತ್ತ ಸ್ವಲ್ಪ ನಿರಾಳ ಮಾಡುತ್ತಾರೆ. ದಿನ ಕಳೆದಂತೆ ಮುಖ ಬಿಗಿದಿರುಸುವಾಗಿನ ಕಷ್ಟ ತಪ್ಪಿಸಲೆಂದೊ ಸಂಜೆಯ ಇತರ ಕಾರ್ಯಕ್ರಮಗಳನ್ನು ತಪ್ಪಿಸಲಾಗದೆಂದೊ ಅವರು ಬಾರದಾದರು. ಮಗನ ಆಪ್ತ ಮಿತ್ರ ಮಾತ್ರ ಪ್ರತಿದಿನವೂ ಬರುತ್ತಾನೆ. ಅಪ್ಪನನ್ನು ಸಂತೈಸುತ್ತಾನೆ. ಆತ ಹೇಳುತ್ತಾನೆ, "ಅಂಕಲ್ ನೀವು ಮನೆಗೆ ಹೋಗಿ ವಿಶ್ರಾಂತಿ ಪಡೆಯಿರಿ. ಇಲ್ಲಿ ನಾನು ಮಲಗುತ್ತೇನೆ." ಆದರೆ ಅಪ್ಪ ಒಪ್ಪುವುದಿಲ್ಲ. ಇದು ನನ್ನ ಕರ್ತವ್ಯ, ನಾನೇ ಮಾಡಬೇಕಾದದ್ದು." ಮಗ ಮಗುವಾಗಿದ್ದಾಗ ಅವನನ್ನು ಎದೆಗವಚಿ ಮಲಗುತ್ತಿದ್ದುದರ ನೆನಪಾಗುತ್ತದೆ. ಮುಖ ತಿರುಗಿ, ಶರ್ಟಿನ ತೋಳಿನಿಂದ ಕಣ್ಣೊರೆಸುತ್ತಾರೆ.

ಒಂದು ರಾತ್ರಿ ಆತ ಹೊರಟುಹೋದ ಬಳಿಕ ಅಪ್ಪ ಯೋಚಿಸಿದರು. ಯಾಕೆ ಮಗನನ್ನು ಇಲ್ಲಿ ಈ ರೀತಿ ಮಲಗಿಸಬೇಕು? ಡಾಕ್ಟ್ರು ಒಳ್ಳೆಯವರಾಗಿದ್ದರು. "ಇಲ್ಲಿ ಮಲಗಿಸುವುದರಿಂದ ಯಾವ ಪ್ರಯೋಜನವೂ ಇಲ್ಲ"ವೆಂದು ಅವರು ಸೂಕ್ತ ರೀತಿಯಲ್ಲಿ ಹೇಳಿದ್ದರು. "ನಾವು ಪ್ರಯತ್ನಿಸುತ್ತೇವೆ. ಆದರೆ ಪ್ರಯೋಜನವಾದೀತೆಂದು ಅನ್ನಿಸ್ತಾ ಇಲ್ಲ. ಹಿ ಈಸ್ ವೆಜಿಟೇಟಿಂಗ್. ಹೀಗೆ ವರ್ಷಗಳ ಕಾಲ ಮಲಗಲೂ ಬಹುದು ಯಾವ ಫೀಲಿಂಗ್ಸ್ ಇಲ್ಲದೆ ವೆಂಟಿಲೇಟರ್‌ನ ಬಲದಿಂದ." ಡಾಕ್ಟರ್ ಪಕ್ಕದಲ್ಲಿ ನಿಂತುಕೊಂಡಿದ್ದ ದಾದಿಯ ಟ್ರೇಯಿಂದ ಒಂದು ಸೂಜಿ ತೆಗೆದು ಹಾಸಿಗೆಯಲ್ಲಿ ನಿಶ್ಚಲ ಬಿದ್ದುಕೊಂಡಿದ್ದ ದೇಹಕ್ಕೆ ಚುಚ್ಚಿದರು. ಮುಖದಲ್ಲಿ ಯಾವ ಭಾವನೆಯೂ ಕಾಣಿಸಲಿಲ್ಲ, ದೇಹದಲ್ಲಿ ಚಲನೆ ಕೂಡ. "ನೋಡಿದಿರಲ್ಲ, ಮಿದುಳು ಸಂಪೂರ್ಣ ನಾಶವಾಗಿದೆ."

ಜೀವವು ಒಂದು ಹನಿಯಂತೆ ದೇಹಕ್ಕೆ ಅಂಟಿಕೊಂಡಿದೆ. ಈ ಜನ್ಮದಲ್ಲಿ ಮಾಡಬೇಕಾದುದನ್ನು ಪೂರ್ಣಗೊಳಿಸಲಿಲ್ಲ ಎಂಬಂತೆ ಯಾವುದೋ ಜನ್ಮದ ಋಣ ಸಂದಾಯ ಮಾಡಲಿಕ್ಕಿರುವಂತೆ ಅವನ ಹೃದಯ ಸ್ಪಂದಿಸುತ್ತಲೇ ಇದೆ.

ಮೇಯರ್ ಕಷ್ಟಕ್ಕೊಳಗಾದರು. ಇಬ್ಬರು ಗುತ್ತಿಗೆದಾರರಲ್ಲಿ ಯಾರನ್ನು ಆಯ್ಕೆ ಮಾಡುವುದು? ಮೂರು ಸಾವಿರ ರೂಪಾಯಿಯ ಅಂತರವಷ್ಟೇ ಇದೆ. ಇಬ್ಬರೂ ಬೇಕಾದವರೂ ಹೌದು. ಎರಡು ದಿನ ಅವರು ಈ ಸಮಸ್ಯೆಯ ಕುರಿತೇ ಯೋಚಿಸಿದರು. ಕೊನೆಗೆ ಹೀಗೊಂದು ನಿರ್ಧಾರಕ್ಕೆ ಬಂದರು. ಗುತ್ತಿಗೆಯನ್ನು ಮೊದಲನೆಯವನಿಗೆ ಅಂದರೆ ರೂ. 75,000 ಕೊಟೇಶನ್ ಕೊಟ್ಟವನಿಗೆ ಕೊಡುವುದು. ಎರಡನೆಯವನಿಗೆ ಮುಂದಿನ ತಿಂಗಳು ಮಾಡಿಸಬೇಕಾದ ಇನ್ನೊಂದು ಕಾಮಗಾರಿಯ ಆಶ್ವಾಸನೆ ನೀಡುವುದು. ಅದುಕೂಡ ಅಂದಾಜು ಒಂದು ಲಕ್ಷ ರೂ. ವೆಚ್ಚದ ಕಾಮಗಾರಿಯೆ. ಈ ನಿರ್ಧಾರ ಸಾಮಾನ್ಯ ರೀತಿಯಲ್ಲಿ ಸ್ವೀಕೃತವಾಯಿತು. ಗುತ್ತಿಗೆ ಹಣದ ಐವತ್ತು ಶತಾಂಶವನ್ನು ಮುಂಚಿತವಾಗಿ ಕೊಡುವ ತೀರ್ಮಾನಕ್ಕೂ ಬಂದರು. ಕಾಮಗಾರಿಯ ತುರ್ತು ಆವಶ್ಯಕತೆಯನ್ನು ಪರಿಗಣಿಸಿ ಉಳಿದೆಲ್ಲವನ್ನೂ ಮುಂದಕ್ಕೆ ಹಾಕಿ ಈ ಗುತ್ತಿಗೆ ಕೆಲಸವನ್ನು ಮಾಡಿ ಮುಗಿಸಲು ಗುತ್ತಿಗೆದಾರನನ್ನು ಕೇಳಿಕೊಳ್ಳಬೇಕೆಂದು ಮೇಯರ್ ಪ್ರತ್ಯೇಕ ನಿರ್ದೇಶ ನೀಡಿದರು. ಹದಿನೈದು ದಿನದೊಳಗೆ ಕೆಲಸ ಮುಗಿಸಿ ದೃಢಪತ್ರಿಕೆ ಸಲ್ಲಿಸಬೇಕು.

ಅಪ್ಪ ಮುಂಜಾನೆ ಎಂದಿನಂತೆ ಕೆಳಗಡೆಗೆ ಇಳಿದು ಬಂದರು. ಒಂದು ಟೀ ಕುಡೀ ಬೇಕು. ಆಮೇಲೆ ಒಂದೈದು ನಿಮಿಷ ರಸ್ತೆ ಬದಿಯಲ್ಲಿ ಹೋಗಿ ಸುಮ್ಮನೆ ನಿಲ್ಲಬೇಕು. ಮುಂಜಾನೆಗಳಲ್ಲಷ್ಟೇ ನೀಡಬಲ್ಲವು ಆಕಾಶಕಿರಣದ ಹೊಂಬೆಳಕನ್ನು. ಆಸ್ಪತ್ರೆಯೆದುರಿನ ಗೂಡಂಗಡಿಯಲ್ಲಿ ಒಳ್ಳೆಯ ಟೀ ಸಿಗುತ್ತದೆ. ಅದನ್ನು ಕುಡಿಯುತ್ತ ಮೆಲ್ಲಗೆ ಚೈತನ್ಯ ತಾಳುತ್ತಿರುವ ನಗರವನ್ನು ದಿಟ್ಟಿಸುವುದು.

ಮರಳಿ ಆಸ್ಪತ್ರೆ ತಲುಪಿದಾಗ ಕ್ಯಾಶುವಲ್ಟಿಯ ಎದುರು ಒಂದು ಸ್ಟ್ರೆಚರ್‌ನಲ್ಲಿ ಒಬ್ಬ ಯುವಕನ ದೇಹ! ರಕ್ತಸಿಕ್ತ ದೇಹವನ್ನು ಒಮ್ಮೆ ಮಾತ್ರ ನೋಡಿದ್ದು. ಬೈಕ್ ಅಪಘಾತವೆಂದು ಯಾರೋ ಹೇಳಿದರು. ರಸ್ತೆಯಲ್ಲಿ ಇರುವ ಶಿಲೆಕಲ್ಲಿಗೆ ತಾಗಿ ರಟ್ಟಿತ್ತು, ಹೋಗಿ ಬಿದ್ದದ್ದು ಓಡುವ ಬಸ್ಸಿನ ಅಡಿಯಲ್ಲಿ. ಆಗಲೇ ಮುಗಿದಿತ್ತು...

ಆತ ಹನ್ನೆರಡನೇ ಮಹಡಿಯ ಕೊಠಡಿಗೆ ಹೋಗಿ ಕುರ್ಚಿಯಲ್ಲಿ ಕುಳಿತರು. ಇಬ್ಬರು ದಾದಿಯರು ಮಗನ ದೇಹವನ್ನು ಸ್ವಚ್ಛಗೊಳಿಸುತ್ತಿರುವರು. "ನೋಡಿ, ಬೆಡ್‌ಸೋರ್ ಬಂದು ಬಿಟ್ಟಿದೆ" ಒಬ್ಬಾಕೆ ಹೇಳಿದಳು. ಆತ ನೋಡಲಿಲ್ಲ, ಮಗನ ನಗ್ನದೇಹವನ್ನು, ಅದೂ ವ್ರಣವಾಗತೊಡಗಿದ್ದ ದೇಹವನ್ನು ನೋಡಲು ಆತ ಇಷ್ಟಪಡಲಿಲ್ಲ. ಕೆಳಗೆ ಕ್ಯಾಶುವಲ್ಟಿಯ ಎದುರು ಸ್ಟ್ರೆಚರ್‌ನಲ್ಲಿದ್ದ, ಅಸುನೀಗಿದ್ದ ಶರೀರ ನೆನಪಿಗೆ ಬಂತು. ಅವನು ಅದೃಷ್ಟವಂತ. ಒಂದೇ ನಿಮಿಷದಲ್ಲಿ ಎಲ್ಲವೂ ಕೊನೆಗೊಂಡಿತು.

ಟಿವಿಯಲ್ಲಿ ಕ್ರಿಕೆಟ್ ನೋಡುತ್ತ ಕುಳಿತಿದ್ದ ಹುಡುಗರು ಆಟ ಮುಗಿದಾಗ ಎದ್ದುನಿಂತರು. "ನಾವು ಆಡೋಣ" ಅವರಲ್ಲಿ ಒಬ್ಬನೆಂದ. "ಸರಿ." ಎಲ್ಲರೂ ಒಟ್ಟಿಗೇ ಹೇಳಿದರು. ಅವರು ಬ್ಯಾಟ್ ಮತ್ತು ಟೆನ್ನಿಸ್ ಚೆಂಡು ಸಹಿತ ಹೊರಬಿದ್ದರು. ರಸ್ತೆಯ ಹಲವಾರು ಉಪಕವಲುಗಳಲ್ಲಿ ಒಂದರಲ್ಲಾಗಿತ್ತು ಪಿಚ್. ಸ್ಟಂಪ್‌ಗಾಗಿ ಆ ಹುಡುಗರು ಹುಡುಕಾಡಿದರು. ಒಂದು ಕಲ್ಲು ಅಲ್ಲವಾದರೆ ಯಾವುದಾದರೂ ಕಟ್ಟಿಗೆ ತುಂಡು. ಇವಷ್ಟೇ ಸ್ಟಂಪ್ ಆಗಿ ಬಳಸುತ್ತಿದ್ದರವರು. ಹುಡುಕುತ್ತಾ ಹೋಗಿ ಅವರು ತಲುಪಿದ್ದು ಮುಖ್ಯ ರಸ್ತೆಯಲ್ಲಿ. ಅಲ್ಲೊಂದು ಶಿಲೆಕಲ್ಲು ಕಾಣಿಸಿತು. ಅಲ್ಲಿ ಟಾರ್‌ನಲ್ಲಿ ಗಟ್ಟಿಗೊಂಡಿದ್ದ ಆ ಕಲ್ಲು ಮುಂಜಾನೆ ಸಂಭವಿಸಿದ್ದ ಬೈಕ್ ಅಪಘಾತದಿಂದಾಗಿ ಸಡಿಲಾಗಿ ಬಿಟ್ಟಿತ್ತೆ. ಇಬ್ಬರು ಹುಡುಗರು ಆಚೀಚೆ ನಿಂತು ಅಲುಗಾಡಿಸಿದಾಗ ಆ ಕಲ್ಲು ಕಿತ್ತು ಬಂದಿತು. ಅವರು ಅದನ್ನು ಎತ್ತಿಕೊಂಡು ಹೋಗಿ ಪಿಚ್‌ನಲ್ಲಿ ಇರಿಸಿ ಆಟವಾಡತೊಡಗಿದರು.

ಎಂಟನೆಯ ಅಪಘಾತವನ್ನೂ ನೋಡಿದ್ದ ಹಾಲೆ ಮೇಸ್ತ್ರಿ ಹುಡುಗರು ಹುಡುಕುವುದನ್ನೂ ಕಲ್ಲನ್ನು ಹಿಡಿದೆತ್ತಿ ಒಯ್ಯುವುದನ್ನೂ ಕಂಡರು. ಸಮೀಪದ ಕಟ್ಟಡದ ಅಂಗಡಿಗೆ ಹೋಗಿ ಆತ ಹತ್ತು ರೂಪಾಯಿಗೆ ಅರ್ಧಕಿಲೋ ಡಾಂಬರ್ ಖರೀದಿಸಿ ಕರಗಿಸಿದರು. ಆಸುಪಾಸಿನಿಂದ ಹೆಕ್ಕಿತಂದ ಜಲ್ಲಿಕಲ್ಲುಗಳನ್ನು ಹಾಕಿ ಆ ಚಿಕ್ಕ ಹೊಂಡವನ್ನು ಮುಚ್ಚಿದರು. ಮೇಲೆ ಕರಗಿಸಿದ್ದ ಡಾಂಬರನ್ನು ಸುರಿದರು.

ರಾತ್ರಿ

ಅಪ್ಪ ನಿದ್ರಿಸದೆ ಕೋಣೆಯೊಳಗೆ ಅತ್ತಿಂದಿತ್ತ ನಡೆಯುತ್ತಿರುವರು. ನಿದ್ರೆ ಆ ಮನುಷ್ಯನನ್ನು ತೊರೆದು ವಾರಗಳೇ ಕಳೆದಿವೆ. ನಡೆದು ನಡೆದು ದಣಿದಾಗ ಹೋಗಿ ಕುರ್ಚಿಯ ಮೇಲೆ ಕೂರುವರು. ಆಗ ತುಸು ಮಂಪರು ಕವಿಯಲೂ ಬಹುದು. ಇವತ್ತು ಆ ಮಂಪರು ಕೂಡ ಆತನನ್ನು ತೊರೆದಿದೆ. ಕುಳಿತರೆ ನೆನಪಿಗೆ ಬರುವುದು ಬೆಳಗ್ಗೆ ಸ್ಟ್ರೆಚರ್‌ನಲ್ಲಿ ಕಂಡಿದ್ದ ಯುವಕನ ದೇಹ. ತನ್ನ ಮಗನ ಮತ್ತು ಸೊಸೆಯ ಬಾಳ್ವೆಯನ್ನು ನಾಶ ಮಾಡಿದ್ದ ಅದೇ ಕಲ್ಲೇ ಆ ಯುವಕನ ಜೀವವನ್ನೂ ತೆಗೆದಿದೆ. ಒಂದು ತಿಂಗಳಾದರೂ ಅದನ್ನು ಯಾರಿಗೂ ಸ್ಥಳಾಂತರಿಸಲು ಸಾಧ್ಯವಾಗಲಿಲ್ಲ. ಇನ್ನೂ ಎಷ್ಟೊಂದು ಜೀವ ನೆತ್ತರು ಆ ಮೂರ್ತಿಯ ಮುಂದೆ ಹೋಮಿಸಬೇಕೊ ಏನೋ?

ಇದ್ದಕ್ಕಿದ್ದಂತೆ ಆತನಿಗೆ ತಾನು ಅಲ್ಲಿ ಆ ಕೊಠಡಿಯೊಳಗೆ, ಸುಮ್ಮಗೆ ಕುಳಿತಿರುವುದರ ನಿರರ್ಥಕತೆ ಮನದಟ್ಟಾಯಿತು. ತಾನು ಬಹಳಷ್ಟು ಕಾರ್ಯಗಳನ್ನು ನೆರವೇರಿಸಬೇಕಾಗಿದೆ. ಆತ ಮಗನ ಮಂಚದ ಬಳಿಗೆ ನಡೆದರು. ಅವನು ಕಣ್ಮುಚ್ಚಿ ಮಲಗಿರುವನು. ನಿದ್ರಿಸುತ್ತಿರುವನೆಂದೇ ಅನ್ನಿಸಿತು. ಆತ ಬಗ್ಗಿ ಅವನ ಕೆನ್ನೆಗೊಂದು ಮುತ್ತುಕೊಟ್ಟರು. ಹಣೆ ನೇವರಿಸಿದರು. ಬಳಿಕ ಸಾವಕಾಶ, ಜೀವವುಳಿಸುತ್ತಿರುವ ಸಾಧನಗಳನ್ನು ಒಂದೊಂದಾಗಿ ಎತ್ತಿ ದೂರವಿರಿಸಿದರು. ಡ್ರಿಪ್ ವೆಂಟಿಲೇಟರ್.

ಆತ ಕಿಟಿಕಿ ಬಳಿಗೆ ಬಂದು ನಿಂತುಕೊಂಡರು. ಹೊರಗೆ ಕಾಣಿಸುತ್ತಿರುವುದು ನಗರದ ನಿದ್ರಿಸುತ್ತಿರುವ ಮುಖ. ಸಮಯ ಒಂದು ಗಂಟೆ, ಅಷ್ಟೇ. ರಾತ್ರಿಗೆ ಇನ್ನೂ ದೀರ್ಘವಿದೆ. ಆತ ಹೋಗಿ ಮರುಬದಿಯಲ್ಲಿರುವ ಮಂಚದ ಮೇಲೆ ಕುಳಿತುಕೊಂಡರು. ಬಳಿಕ ಸಾವಕಾಶವಾಗಿ ಅದರಲ್ಲಿ ನೆಟ್ಟಗೆ ಕೈಕಾಲು ಚಾಚಿ ಮಲಗಿದರು. ಒಂದು ನಿಮಿಷದೊಳಗೇ ಹಾಯಾಗಿ ನಿದ್ರಿಸತೊಡಗಿದರು. ●

**BACK TO THE MAIN PAGE**